

# ಹೋಳಿ ರಂಗಿನೋಕುಳಿ

**ರಂಗಿನ ಹಬ್ಬ ಹೋಳಿ. ಬಣ್ಣದ ಹಬ್ಬದೊಂದಿಗೆ ಫ್ಯಾಷನ್ ಕೂಡ ತಳುಕು ಹಾಕಿಕೊಂಡಿದೆ. ಫ್ಯಾಷನಬಲ್ ಉಡುಪಿನ ಜೊತೆಗೆ ಬಣ್ಣ ಬಣ್ಣದ ಆ್ಯಕ್ಸೆಸರೀಸ್ ಕೂಡ ಹಬ್ಬಕ್ಕೆ ಮೆರುಗು ನೀಡುತ್ತವೆ. ಅಂದಹಾಗೆ ಮಾರ್ಚ್ 25 ಹೋಳಿ ಹಬ್ಬ.**

■ **ಆಶಾ ಎಸ್‌. ಕುಲಕರ್ಣಿ**

ಹೋಳಿ ಹಬ್ಬಕ್ಕೆ ಬಣ್ಣಗಳ ಮೆರುಗು. ಫ್ಯಾಷನ್ ಜಗತ್ತಿಗೂ ರಂಗಿನ ಹಬ್ಬಕ್ಕೂ ಅವಿನಾಭಾವ ಸಂಬಂಧ. ಹೀಗಾಗಿ ಫ್ಯಾಷನ್‌ಪ್ರಿಯರಿಗೆ ಹೋಳಿ ಹಬ್ಬ ಎಂದರೆ ಎಲ್ಲಿಲ್ಲದ ಪ್ರೀತಿ, ಸಂಭ್ರಮ. ನಮ್ಮ ಸಾಂಸ್ಕೃತಿಕ ಹಬ್ಬಗಳಲ್ಲೊಂದಾದ ಈ ಹೋಳಿ ಹಬ್ಬದ ಆಚರಣೆ ಉತ್ತರ ಭಾರತದಲ್ಲಿ ಜೋರು. ಆದರೂ ದೇಶದ ಹಲವಾರು ನಗರಗಳಲ್ಲಿ, ಗ್ರಾಮೀಣ ಭಾಗಗಳಲ್ಲೂ ಹೋಳಿ ಆಚರಣೆಗೆ ಸಿದ್ಧತೆ ಒಂದು ವಾರ ಮುಂಚಿತವಾಗಿಯೇ ಪ್ರಾರಂಭವಾಗುತ್ತದೆ.

ಮಥುರಾ ವೃಂದಾವನದಂತಹ ಕೃಷ್ಣನ ನಗರಗಳಲ್ಲಿ ಹೋಳಿ ಹಬ್ಬವನ್ನು ವಿಶಿಷ್ಟವಾಗಿ ಆಚರಿಸಲಾಗುತ್ತದೆ. ಒಂದು ನಗರದಿಂದ ಇನ್ನೊಂದು ನಗರಕ್ಕೆ ರಂಗುರಂಗಿನ ಹೋಳಿ ಆಡಲು ಬರುವ ಯುವಕರಿಗೆ 'ಲಟ್ಟಮಾರ್' ಎಂದು ಕೋಲಿನಿಂದ ಹೊಡೆದು ಓಡಿಸುವ ಹಬ್ಬವೇ ಇಲ್ಲಿ ಹೋಳಿ ಹಬ್ಬ. ಗ್ರಾಮೀಣ ಭಾಗದಲ್ಲಿ ವಿಶಿಷ್ಟ ರೀತಿಯಲ್ಲಿ ಬಣ್ಣ ಬಣ್ಣದ ನೀರಿನಿಂದ ತುಂಬಿರುವ ಕೊಳಗಳನ್ನು ನಿರ್ಮಿಸಿ ಅದರಿಂದಲೇ ಒಬ್ಬರಿಗೊಬ್ಬರು ಎರಚುವುದು, ಹಾಗೇ ಆ ಹೊಂಡಗಳಲ್ಲಿಯೇ ಮಿಂದೇಳುವುದು, ಪಿಚಕಾರಿಗಳನ್ನು ಬಳಸಿ ರಂಗಿನಾಟವಾಡುವುದು ಸಾಮಾನ್ಯ ದೃಶ್ಯ.

ನಗರ ಪ್ರದೇಶಗಳಲ್ಲಿ ಇದೀಗ ಈ ಹಬ್ಬ ಫ್ಯಾಷನ್ ಟ್ರೆಂಡ್ ಅನ್ನೇ ಸೃಷ್ಟಿಸಿದೆ. ಹೋಳಿ ಪಾರ್ಟಿ ಏರ್ಪಡಿಸಲಾಗುತ್ತಿದ್ದು, ಬಣ್ಣ ಬಣ್ಣದ ಉಡುಪಿನ ಜೊತೆಗೆ ಅದಕ್ಕೆ ಮ್ಯಾಚಿಂಗ್ ಆಗುವ ಆ್ಯಕ್ಸೆಸರೀಸ್ ಕೂಡ ಧರಿಸಿಕೊಳ್ಳುವುದು ಫ್ಯಾಷನ್‌ಪ್ರಿಯರ ಮೆಚ್ಚಿನ ಹವ್ಯಾಸವೇ ಆಗಿದೆ. ಬಣ್ಣಗಳ ರೈನ್ ಡ್ಯಾನ್ಸ್ ಪಾರ್ಟಿಗಳು ಆಧುನಿಕ ಜಗತ್ತಿನ ಸಂಸ್ಕೃತಿಯ ತುಣುಕುಗಳಾಗಿದ್ದು, ಇದಕ್ಕೊಪ್ಪುವ ಸ್ಟೈಲಿಷ್ ಡಿಸೈನರ್ ಉಡುಪುಗಳ ತಯಾರಿಕೆಯಲ್ಲಿ ಫ್ಯಾಷನ್ ವಿನ್ಯಾಸಗಾರರು ತೊಡಗಿಕೊಂಡಿದ್ದಾರೆ.

ಹೋಳಿ ಪಾರ್ಟಿಗಳಲ್ಲಿ ಹೆಚ್ಚಾಗಿ ಕಂಡುಬರುವುದು ಶ್ವೇತಾಂಬರಿ ಉಡುಪುಗಳೇ. ಬಣ್ಣಗಳ ಹಬ್ಬಕ್ಕೆ ಬಿಳಿ ವಸ್ತ್ರವೇ ಫ್ಯಾಷನ್. ಏಳು